**ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಮಂಡ್ಯ ಜಿಲ್ಲೆಯಲ್ಲಿ ಜನವರಿ 2014 ರಿಂದ ಡಿಸೆಂಬರ್ 2014 ರ ತನಕ ಬೀದಿನಾಯಿಗಳ ಕಡಿತಕ್ಕೆ ಒಳಗಾದವರ ವಿವರ.

| ಗಂಡಸರು | ಹೆಂಗಸರು | ಮಕ್ಕಳು | ಒಟ್ಟು |
|---|---|---|---|
| 5354 | 3015 | 2855 | 11224 |

ಮಂಡ್ಯ ಜಿಲ್ಲೆಯಲ್ಲಿ ಜನವರಿ 2015 ರಿಂದ 15-03-2015ರ ವರೆಗೂ ಬೀದಿನಾಯಿಗಳ ಕಡಿತಕ್ಕೆ ಒಳಗಾದವರ ವಿವರ.

| ಗಂಡಸರು | ಹೆಂಗಸರು | ಮಕ್ಕಳು | ಒಟ್ಟು |
|---|---|---|---|
| 423 | 255 | 225 | 903 |

ಮಂಡ್ಯ ಜಿಲ್ಲೆಯಲ್ಲಿ ನಾಯಿ ಕಡಿತಕ್ಕೆ ಒಳಗಾಗಿ ಮರಣ ಹೊಂದಿರುವ ಪ್ರಕರಣಗಳು ವರದಿಯಾಗಿರುವುದಿಲ್ಲ.

ಆ) ಹೌದು.

ದಾಸ್ತಾನು ಇದೆ.

ಇ) ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗುತ್ತಿದೆ.

**ಪರಿಶಿಷ್ಟ ಪಂಗಡ ಜಾತಿ ದೃಢೀಕರಣ ಪತ್ರ**

**2660 (2450); ಶ್ರೀ ಚಿಕ್ಕಮಾದು ಎಸ್. (ಹೆಚ್.ಡಿ. ಕೋಟೆ)**

ಅ) ಮೈಸೂರು ಜಿಲ್ಲೆಯಲ್ಲಿ ನಾಯಕ ಜನಾಂಗದವರು ಪರಿಶಿಷ್ಟ ಪಂಗಡದ ಜಾತಿ ಧೃಡೀಕರಣ ಪತ್ರ ನೀಡಲು ಸಲ್ಲಿಸಬೇಕಾದ ಅಗತ್ಯ ದಾಖಲಾತಿಗಳು ಯಾವುವು ಸರ್ಕಾರದ ಮಾರ್ಗ ಸೂಚಿಗಳಿಗನುಸಾರ ವಿವರ ಒದಗಿಸುವುದು;

ಆ) ಅಭ್ಯರ್ಥಿ ಶಾಲಾ ದಾಖಲಾತಿಗಳಲ್ಲಿ ನಾಯಕ ಎಂದಿದ್ದು ತಂದೆ ಜಾತಿ ಪರಿವೀರನಾಯಕ ಎಂಬುವರಿಗೆ ಹಾಗೂ ಅಭ್ಯರ್ಥಿ ಶಾಲಾ

ದಾಖಲಾತಿಯಲ್ಲಿ ಪರಿವಾರ ನಾಯಕ ತಂದೆ ಜಾತಿ ನಾಯಕ ಎಂಬುವರಿಗೆ ದಾಖಲಾಗಿರುವ ಪ್ರಕರಣಗಳಲ್ಲಿ ಪ್ರವರ್ಗ–1 ಜಾತಿ ಪ್ರಮಾಣ ಪತ್ರ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

**ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)**

ಅ) ಮೈಸೂರು ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡ "ನಾಯಕ" ಜನಾಂಗಕ್ಕೆ ಸೇರಿರುವ ಬಗ್ಗೆ ಸಿಂಧುತ್ವ ಪ್ರಮಾಣ ಪತ್ರ ಪಡೆಯಲು ಈ ಕೆಳಕಂಡ ದಾಖಲಾತಿಗಳನ್ನು ಒದಗಿಸಬೇಕಾಗುತ್ತದೆ.

1) ಅಭ್ಯರ್ಥಿಯ ತಂದೆ/ತಾಯಿ ಸರ್ಕಾರಿ ಸೇವೆಯಲ್ಲಿದ್ದರೆ, ಸೇವಾಪುಸ್ತಕದ ದೃಢೀಕೃತ ನಕಲು
2) ಅಭ್ಯರ್ಥಿಯ ಪ್ರಾಥಮಿಕ ಶಾಲಾ ದಾಖಲಾತಿ.
3) ಟಿ.ಸಿ.
4) ಕ್ಯುಮ್ಯುಲೇಟಿವ್ ರೆಕಾರ್ಡ್
5) ಅಭ್ಯರ್ಥಿಯ ಸಹೋದರ/ಸಹೋದರಿಯವರು ವ್ಯಾಸಂಗ ಮಾಡಿದ್ದಲ್ಲಿ, ಪ್ರಾಥಮಿಕ ಶಾಲಾ ದಾಖಲಾತಿ
6) ಅಭ್ಯರ್ಥಿಯ ಜಾತಿ ಪ್ರಮಾಣ ಪತ್ರ
7) ಅಭ್ಯರ್ಥಿಯ ತಂದೆ ಹಾಗೂ ಅವರ ಸಹೋದರ ಸಹೋದರಿಯರ ಜಾತಿ ಪ್ರಮಾಣ ಪತ್ರ ಹಾಗೂ ಅವರ ಮಕ್ಕಳ ಶಾಲಾ ದಾಖಲಾತಿ
8) ಅಭ್ಯರ್ಥಿಯ ತಂದೆ ವಿದ್ಯಾಭ್ಯಾಸ ಮಾಡಿದ್ದಲ್ಲಿ ಅವರ ಶಾಲಾ ದಾಖಲಾತಿ ಪ್ರತಿ.
9) ₹ 20/–ರ ಬಾಂಡ್ ಪೇಪರ್‌ನಲ್ಲಿ ನೋಟರಿಯವರಿಂದ ಪಡೆದ ಘೋಷಣಾ ಪತ್ರ.
10) **ಇತ್ತೀಚಿನ ಭಾವಚಿತ್ರ – 3**
11) **ವಂಶವೃಕ್ಷ**

12) **ಮತದಾರರ ಪಟ್ಟಿ**

13) **ರೇಷನ್ ಕಾರ್ಡ್**

14) **ವಾಸಸ್ಥಳ ದೃಢೀಕರಣ ಪತ್ರ**

–ಮೇಲ್ಕಂಡ ದಾಖಲಾತಿಗಳ ಜೊತೆಗೆ ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರರು ಹಾಗೂ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಸ್ಥಳ ಮಹಜರ್ ವರದಿಯ ಆಧಾರದ ಮೇಲೆ ಸಿಂಧುತ್ವ ಪ್ರಮಾಣ ಪತ್ರ ವಿತರಿಸಲಾಗುವುದು.

ಆ) ಅಭ್ಯರ್ಥಿಯ ಶಾಲಾ ದಾಖಲಾತಿಗಳಲ್ಲಿ ನಾಯಕ ಎಂದಿದ್ದು ತಂದೆ ಜಾತಿ ಪರಿವಾರ ನಾಯಕ ಎಂದಿರುವವರಿಗೆ ಹಾಗೂ ಅಭ್ಯರ್ಥಿಯ ಶಾಲಾ ದಾಖಲಾತಿಯಲ್ಲಿ ಪರಿವಾರ ನಾಯಕ ತಂದೆ ಜಾತಿ ನಾಯಕ ಎಂದಿರುವ ಪ್ರಕರಣಗಳ ಸಿಂಧುತ್ವ ಪ್ರಮಾಣ ಪತ್ರ ನೀಡಲು ಕೋರಿ ಸಲ್ಲಿಕೆಯಾಗಿರುವುದಿಲ್ಲ. ಪ್ರವರ್ಗ–1 ರ ಸಿಂಧುತ್ವ ಪ್ರಮಾಣ ಪತ್ರಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ನೀಡಲಾಗುತ್ತಿಲ್ಲ.

**ವಸತಿ ನಿಲಯಗಳ ದುರಸ್ತಿ**

**2661 (3188); ಡಾ॥ ಅಜಯ್ ಸಿಂಗ್ (ಜೇವರ್ಗಿ)**

ಅ) ಕಲಬುರ್ಗಿ ಜಿಲ್ಲೆಯಲ್ಲಿ ಕಳೆದ 15–20 ವರ್ಷಗಳ ಹಿಂದೆ ನಿರ್ಮಾಣಗೊಂಡ ವಸತಿ ನಿಲಯಗಳೆಷ್ಟು ಅವುಗಳ ಈಗಿನ ಪರಿಸ್ಥಿತಿ ಏನು ಅದರಲ್ಲಿ ಜೇವರ್ಗಿ ತಾಲ್ಲೂಕಿನಲ್ಲಿರುವ ವಸತಿ ನಿಲಯಗಳೆಷ್ಟು;

ಆ) 15–20 ವರ್ಷಗಳ ಹಿಂದೆ ನಿರ್ಮಾಣಗೊಂಡ ವಸತಿ ನಿಲಯಗಳು ಆಗಿನ ವ್ಯವಸ್ಥೆಗೆ ತಕ್ಕಂತೆ ನಿರ್ಮಾಣಗೊಂಡಿದ್ದು 3–4 ಕೋಟೆಗಳಿಂದ ಕೂಡಿವೆ ಈಗಿನ ಕಟ್ಟಡ ವಿನ್ಯಾಸ ಮತ್ತು ಆಗಿನ ವಿನ್ಯಾಸದಲ್ಲಿ ಮತ್ತು ವ್ಯವಸ್ಥೆಯಲ್ಲಿ ವ್ಯತ್ಯಾಸವೇನಾದರೂ ಇದೆಯೇ;

ಇ) ಜೇವರ್ಗಿ ತಾಲ್ಲೂಕಿನಲ್ಲಿ 15–20 ವರ್ಷಗಳ ಹಿಂದೆ ನಿರ್ಮಾಣಗೊಂಡ ವಸತಿ ನಿಲಯಗಳಲ್ಲಿ ಸಮರ್ಪಕವಾದ ಕುಡಿಯುವ ನೀರು,